ಪ್ರಾಣಪದಕವಾಗಿದ್ದ ಮಗಳನ್ನು ತಾನು ನಿವಾರಿಸಿಕೊಳ್ಳಲು ನೋಡುತ್ತಿದ್ದೇನೆಯೇ? ಸಂಬಂಧಗಳು ಅಂದರೆ ಹೀಗೇನೇ? ಒಂದು ಕಾಲದ ಮೋಹ, ಪ್ರೀತಿಗಳು ಸದಾಕಾಲವೂ ಉಳಿದುಕೊಂಡಿರದೆ ಸಂದರ್ಭಾನುಸಾರ ಬಣ್ಣ ಬದಲಿಸುತ್ತವೆಯೇ? ರಕ್ತಸಂಬಂಧದಂತಾ ಸನಿಹದವರಲ್ಲೂ?

★★★

ಮೀನಾಕ್ಷಿಯ ಆತ್ಮಹತ್ಯೆಯೊಂದಿಗೆ ಆ ಮನೆಯಲ್ಲಿ ಕೆಲವೊಂದು ಮಾರ್ಪಾಟುಗಳಾದುವು, ಅನಿವಾರ್ಯವಾಗಿ. "ಇನ್ನು ಇವಳು ಈ ಮನೇಲಿ ಓಡಾಡ್ಕೊಂಡಿರೋದು ನೋಡೋರ ಕಣ್ಣಿಗೆ ಚೆನ್ನಾಗಿ ಕಾಣಲ್ಲ ಅಪ್ಪಾ..." ಮುಲಾಜಿಲ್ಲದೆ ಹೇಳಿದ್ದಳು ನೇತ್ರಾ. ಅಷ್ಟೂ ಗೊತ್ತಿಲ್ಲದ ಪೆದ್ದನಲ್ಲ ಜನಾರ್ದನ. ತಾನೊಬ್ಬನೇ ಇರುವಾಗ ಮಾಲಕ್ಷ್ಮಿ ಈ ಮನೆಗೆ ಬಂದು ಓಡಾಡುವುದು ಅವನಿಗೂ ಸರಿ ಎನಿಸುತ್ತಿರಲಿಲ್ಲ. ಪದ್ದಯ್ಯನೊಡನೆ ಮಾತುಕತೆ ನಡೆದು ಅವರು ಈ ಮನೆಯಲ್ಲಿ ಕಾಯಮ್ಮಾಗಿ ಇರುವುದೆಂದು ತೀರ್ಮಾನ ಆಯ್ತು. ಮುಪ್ಪಿನ ಕಾಲದಲ್ಲಿ ಅನಾಯಾಸವಾಗಿ ದೊರೆತ ಆಸರೆ ಪದ್ದಯ್ಯನಿಗೂ ಹಿತವಾಯ್ತು. ದಿನದಲ್ಲಿ ಮೂರು ಹೊತ್ತು ಮಾಲಕ್ಷ್ಮಿ ಈ ಮನೆಗೆ ಬಂದು ಪಾಪಣ್ಣನ ಅನಿವಾರ್ಯಕ್ಕೆ ಒದಗುವುದೆಂದು ತೀರ್ಮಾನ ಮಾಡಿದರೆ ಅದೂ ನೇತ್ರನಿಗೆ ಇಷ್ಟವಾಗಲಿಲ್ಲ.

"ಅಷ್ಟೂ ಮಾಡೋಕಾಗಲ್ವಾ ನಿಂಗೆ?" ಮಗಳು ಅಪ್ಪನನನ್ನು ವಿಚಾರಿಸಿಕೊಂಡಳು.

"ಹಂಗಲ್ಲ ಕಣೇ. ಅವಳಿಗೆ ಹೊಂದಿಕೊಂಡಿದಾನೆ ಪಾಪಣ್ಣ. ಅವಳು ಕಾಣಲಿಲ್ಲ ಅಂದ್ರೆ ಎಣ್ತಾನೇನೋ ಅಂತ..."

"ಅದಕ್ಕೆಂತ ಗೊತ್ತಾಗುತ್ತೆ?" ಅಂದಳು ಮಗಳು. ಜನಾರ್ದನನ ಮನಸ್ಸಿಗೆ ಬರೆ ಎಳೆದಂತಾಯ್ತು. ಒಡಹುಟ್ಟಿದ ತಮ್ಮ ಎಂದರೆ ಇಷ್ಟು ತುಚ್ಛ ಭಾವನೆಯೇ? ಇವಳನ್ನು ತಲೆಯ ಮೇಲೆ ಕೂರಿಸಿಕೊಂಡು ಬೆಳೆಸಿದ್ದು ತಮ್ಮದೇ ತಪ್ಪಾಯ್ತಾ? ಲಗಾಮಿಲ್ಲದೆ ಮಾತಾಡುವುದು ಅಭ್ಯಾಸವಾಗಿಬಿಟ್ಟಿತಾ? "ನೋಡೋಣ..." ಎನ್ನುತ್ತಾ ಅಡ್ಡಗೋಡೆಯ ಮೇಲೆ ದೀಪ ಇಟ್ಟಿದ್ದ ಜನಾರ್ದನ.

ಅಮ್ಮನ ಕರ್ಮಾಂತರಗಳಿಗೆಂದು ಬಂದ ನೇತ್ರಾ ಬರಿಗೈಯಲ್ಲಿ ವಾಪಸಾಗಿರಲಿಲ್ಲ. ಅಮ್ಮನ ಚಿನ್ನಾಭರಣಗಳನ್ನು ತನ್ನೊಂದಿಗೆ ಕೊಂಡೊಯ್ದಿದ್ದಳು.

"ಮನೇಲಿ ಯಾವಾಗ ನೋಡಿದ್ರೂ ಹೊಟ್ಟೆಗಿಲ್ದಿರೋರ ಕಾರುಬಾರು. ಮನೇನೇ ಹೊತ್ಗಂಡ್ಹೋದ್ರೂ ಗೊತ್ತಾಗಲ್ಲ ನಿಂಗೆ..." ತನ್ನ ನಿರ್ಧಾರಕ್ಕೆ ಒಂದು ಸಕಾರಣ. ಮೀನಾಕ್ಷಿ ಬದುಕಿರುವವರೆಗೆ ಈ ಮನೆಯಲ್ಲಿ ಯಾವ ಪದಾರ್ಥವೂ ಕಳ್ಳತನವಾದ ದೂರು ಬಂದಿರಲಿಲ್ಲ. ಆದರೆ ಯಾರಿಗೆ ಗೊತ್ತಿದೆ? ಅವಕಾಶ ಕಲ್ಪಿಸಿಕೊಟ್ಟು ಪರೀಕ್ಷೆ ಮಾಡುವುದು ಬುದ್ಧಿವಂತಿಕೆಯೇನಲ್ಲ. ನಾಳೆ ಏನಿದ್ದರೂ ಎಲ್ಲಾ ಮಗಳಿಗೇ ತಾನೇ? "ನಿಂಗೆ ಏನೇನು ಬೇಕೋ ಎಲ್ಲಾ ತಗೊಂಡ್ಹೋಗು. ನಿನ್ನಮ್ಮನ ಸೀರೆ, ಒಡವೆ ನಿಂಗಲ್ದೆ ಮತ್ಯಾರಿಗೆ?" ಅಂದಿದ್ದ ಜನಾರ್ದನ. ಅಮ್ಮನ ಅಗಲಿಕೆ ನೇತ್ರನಿಗೆ ದುಃಖ ತಂದಿರಲಿಲ್ಲವೆಂದಲ್ಲ. ಆದರೆ ವಾಸ್ತವಪ್ರಜ್ಞೆ ದುಃಖವನ್ನು ಹಿಂದಿಕ್ಕುವಷ್ಟು ಪ್ರಬಲವಾಗಿತ್ತು ಅಂದರೆ ಅದು ತಪ್ಪೂ ಅಲ್ಲ, ಬಹುಶಃ, ಅನಿಸಿತ್ತು ಜನಾರ್ದನನಿಗೆ.

★★★

'ಹಕ್ಕು ಮಾತ್ರಾ ತನ್ನದು. ಜವಾಬ್ದಾರಿಯ ಗೊಡವೆ ತನಗಿಲ್ಲ' ಎನ್ನುವಂತಿತ್ತು ನೇತ್ರನ